ಗುಂಟೆ ಸ್ಥಳವನ್ನು ನಮಗೆ ಈಗಾಗಲೇ ಕೊಟ್ಟಿದ್ದಾರೆ. 1993-94ನೇ ಇಸವಿಯಲ್ಲಿ ಈ ಕೆಲಸವನ್ನು ಪ್ರಾರಂಭ ಮಾಡುತ್ತೇವೆ. ಅದಕ್ಕೇ ಎಲ್ಲಾ ಯೋಜನೆ ಕಾರ್ಯಕ್ರಮಗಳ ಸಿದ್ಧತೆಯನ್ನು ಮಾಡಿಕೊಂಡಿದ್ದೇವೆ. ಮತ್ತು ಉತ್ತರ ಕರ್ನಾಟಕದಲ್ಲಿ ಹೆಚ್ಚು ವಸತಿ ಸೌಕರ್ಯಗಳನ್ನು ಕೊಡಲಿಕ್ಕೆ ಆಗಿಲ್ಲ, ಈವರೆಗೆ ಕೊಟ್ಟಿಲ್ಲ. ಇನ್ನು ಮುಂದೆ 1993-94ನೇ ಇಸವಿಯೊಳಗೆ ಏನು ತಾರತಮ್ಯ ಇದೆ, ಇಂಬ್ಯಾಲೆನ್ಸ್ ಇದೆ, ಅದನ್ನು ಸರಿ ಮಾಡುತ್ತೇವೆ. ವಿಶೇಷವಾಗಿ ಉತ್ತರ ಕರ್ನಾಟಕದ ಬಗ್ಗೆ ಡಿ. ಆರ್. ಪಾಟೀಲ್‌ರವರು ಹೇಳಿದ್ದಾರೆ. ಅದು ನಮ್ಮ ತಪ್ಪು ಒಪ್ಪಿಕೊಂಡು ಇನ್ನು ಮುಂದೆ ಉತ್ತರ ಕರ್ನಾಟಕಕ್ಕೆ ತಾರತಮ್ಯ ಆಗದಂತೆ ಹೆಚ್ಚಿನ ವಸತಿ ಸೌಕರ್ಯವನ್ನು ನಿರ್ಮಿಸಬೇಕೆಂದು ನಾವು ' ಕೈಗೊಂಡಿದ್ದೆವೆ, ಮತ್ತು ಹುಬ್ಬಳ್ಳಿ - ಧಾರವಾಡ ಮಹಾನಗರದಲ್ಲಿ 1993-94ನೇ ಇಸವಿಯೊಳಗೆ ಸೆಟಲ್ಮೆಟ್ ಟೌನ್ ಕೂಡ ನಾವು ಮಾಡಬೇಕೆಂದು ನಿರ್ಧರಿಸಿದ್ದೇವೆ.

ಶ್ರೀ ಡಿ. ಆರ್. ಪಾಟೀಲ್ : ಗದಗಿನ ಹತ್ತಿರ ಎರಡು ಸೆಟಲ್ಮೆಟ್ ಟೌನ್‌ಶಿಪ್ ಕಟ್ಟಬೇಕೆಂದು ನಾನು ತಮಗೆ ಪ್ರಸ್ತಾವನೆ ಕಳುಹಿಸಿದ್ದೇನೆ. ಅದನ್ನು ಮಾಡುತ್ತೀರೋ, ಹೇಗೆ ?

ಶ್ರೀ ಗೋಪಿನಾಥ್ ಆರ್. ಸಾಂದ್ರ : ನಾವು ಪರಿಶೀಲಿಸುತ್ತೇವೆ.

ವಿಷಯ :- ಸಾತನೂರಿನಲ್ಲಿ ಐ.ಟಿ.ಐ ತರಬೇತಿ ಸಂಸ್ಥೆ

Q:368

ಶ್ರೀ ಡಿ. ಕೆ. ಶಿವಕುಮಾರ್ (ಸಾತನೂರು) : ಮಾನ್ಯ ಕಾರ್ಮಿಕ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೇ?

ಅ) ಸಾತನೂರಿನಲ್ಲಿ ಐ.ಟಿ.ಐ. ತರಬೇತಿ ಸಂಸ್ಥೆ ಪ್ರಾರಂಭಿಸಲು ಸ್ಥಳೀಯರಿಂದ ಅಥವಾ ಆ ಕ್ಷೇತ್ರದ ಪ್ರತಿನಿದಿಯಿಂದ ಬೇಡಿಕೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) 1993-94 ನೇ ಸಾಲಿನಲ್ಲಿ ಐ.ಟಿ.ಐ. ತರಬೇತಿ ಸಂಸ್ಥೆ ಪ್ರಾರಂಭಿಸಲು ಸರ್ಕಾರವು ಕಾರ್ಯಕ್ರಮ ಹಮ್ಮಿ ಕೊಂಡಿದೆಯೇ?

ಇ) ಕನಕಪುರದಲ್ಲಿ ಇರುವ ಐ. ಟಿ. ಐ.ನಲ್ಲಿ ಹೊಸ ಕೋರ್ಸನ್ನು ಪ್ರಾರಂಭಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬ್ಲೆಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) :

ಅ) ಇಲ್ಲಾ

ಆ) ಸಾತನೂರಿಸಲ್ಲಿ ಸ್ಥಾಪಿಸುವ ಉದ್ದೇಶವಿಲ್ಲ.

ಇ) ಕನಕಪುರದಲ್ಲಿರುವ ಐ. ಟಿ. ಐ.ನಲ್ಲಿ ಹೊಸ ಟ್ರೇಡ್‌ಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಇರುವುದಿಲ್ಲ.

ಶ್ರೀ ಡಿ. ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೇ, ಸಾತನೂರಿನಲ್ಲಿ ಒಂದು ಐ. ಟಿ. ಐ. ತರಬೇತಿ ಸಂಸ್ಥೆಯನ್ನು ಪ್ರಾರಂಭಿಸಲು ಸ್ಥಳೀಯರಿಂದ ಅಥವಾ ಆ ಕ್ಷೇತ್ರದ ಪ್ರತಿನಿಧಿಗಳಿಂದ ಸರ್ಕಾರಕ್ಕೆ ಬೇಡಿಕೆ ಬಂದಿದೆಯೇ ಎಂದು ನಾನು ಕೇಳಿರುವ ಪ್ರಶ್ನೆಗೆ ಇಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ನಾನೇ ಈ ಹಿಂದೆ ಎರಡು ಸಾರಿ ಮಾನ್ಯ ಕಾರ್ಮಿಕ ಮಂತ್ರಿಗಳಾಗಿದ್ದ ನಾಡಗೌಡರಿಗೆ ಮನವಿಯನ್ನು ಕೊಟ್ಟಿದ್ದೆ ಅಲ್ಲದೆ ಈಗಿರತಕ್ಕ ಮಾನ್ಯ ಮಂತ್ರಿಗಳಿಗೂ

ಕೊಟ್ಟಿದ್ದೇನೆ. ಮಾನ್ಯ ಮಂತ್ರಿಗಳ ಕಛೇರಿಯಿಂದ ನನಗೆ ಒಂದು ಪತ್ರ ಬಂದಿದ್ದು, ನಿಮ್ಮ ಅರ್ಜಿ ಬಂದಿದೆ, ಇದರ ಬಗ್ಗೆ ಸೂಕ್ತ ಕಾಲದಲ್ಲಿ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಇಲ್ಲಿ ನೋಡಿದರೆ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ನಾನಾದರೂ ಹೇಳುತ್ತೇನೆ, ಇವರು ಕಾರ್ಮಿಕ ಮಂತ್ರಿಗಳಾದ ಮೇಲೆ ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು. ಹಿಂದೆ ಕಾನೂನು ಮಂತ್ರಿಗಳಾಗಿದ್ದಾಗ ನಮ್ಮ ಬಗ್ಗೆ ಬಹಳ ವಿಶ್ವಾಸ ಇಟ್ಟುಕೊಂಡಿದ್ದರು. ಆದರೆ ಈಗ ನಮ್ಮ ಬಗ್ಗೆ ಬಹಳ ಅಲಕ್ಷ್ಯವನ್ನು ತೋರಿಸುತ್ತಿದ್ದಾರೆ. ಲಿಖಿತ ಮೂಲಕವಾಗಿ ಒಂದು ಪ್ರಶ್ನೆಗೆ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ನನಗೆ ಒಂದು ಉತ್ತರವನ್ನು ಕೊಟ್ಟಿದ್ದಾರೆ. ಜಪಾನೀಸ್ ಟೌನ್‌ಶಿಪ್ ಅನ್ನು ಮಾಡುವ ಸಂದರ್ಭದಲ್ಲಿ ಜಮೀನನ್ನು ಕಳೆದುಕೊಂಡ ರೈತರಿಗೆ ಸೂಕ್ತ ರೀತಿಯಲ್ಲಿ ತಾಂತ್ರಿಕ ತರಬೇತಿ ವ್ಯವಸ್ಥೆ ಮಾಡಿ ತಾಂತ್ರಿಕ ಮಟ್ಟದಲ್ಲಿ ಉನ್ನತ ಕೈಗಾರಿಕೆಗಳಲ್ಲಿ ಕೆಲಸ ಸಿಗುವಂತೆ ಮಾಡುವ ಉದ್ದೇಶವಿದೆ ಎಂದು ಹೇಳಿದ್ದಾರೆ. ಇವತ್ತು ನಮ್ಮ ಸಾತನೂರಿನಲ್ಲಿ ಇಂಜಿನಿಯರಿಂಗ್ ಕಾಲೇಜನ್ನಾಗಲಿ ಡಿಪ್ಲೊಮಾ ಕಾಲೇಜುಗಳನ್ನಾಗಲಿ ಕೊಡುವುದಕ್ಕೆ ನಿಮಗೆ ಸಾಧ್ಯವಾಗಿಲ್ಲ. ಹೋಗಲಿ ಐ. ಟಿ. ಐ. ಆದರೂ ಕೊಟ್ಟರೆ ಅಲ್ಲಿನ ಜನರಿಗೆ ಕೆಲಸ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಈ ವರ್ಷ ನಮ್ಮ ಸಾತನೂರಿನಲ್ಲಿ ಒಂದು ಐ.ಟಿ.ಐ.ಅನ್ನು ಪ್ರಾರಂಭಿಸಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಆಲೋಚನೆ ಮಾಡುತ್ತಿದ್ದೇನೆ. ತಮ್ಮ ಕ್ಷೇತ್ರದಲ್ಲಿ ಒಂದು ಐ.ಟಿ.ಐ. ಬೇಕೆಂದು ಕೇಳುತ್ತಿದ್ದೀರಿ. ಅಲ್ಲಿ ಜಪಾನೀಸ್ ಕಾಲೋನಿ ಬರುತ್ತದೆ., ಅಲ್ಲಿ ನಮ್ಮ ಯುವಕರಿಗೆ ತರಬೇತಿ ಕೊಟ್ಟರೆ ಅನುಕೂಲವಾಗುತ್ತದೆಂದು ಕೇಳುತ್ತಿರುವುದು ಒಳ್ಳೆಯದು. ಈ ಕಾರಣಕ್ಕಾಗಿ ಮಾತ್ರವಲ್ಲ ಆ ಪ್ರದೇಶಗಳಲ್ಲಿ ಯಾವ ರೀತಿಯ ಐ.ಟಿ.ಐ. ಅನ್ನು ಸ್ಥಾಪನೆ ಮಾಡಬಹುದೆಂದು ಪರಿಶೀಲಿಸಿ ತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಡಿ. ಕೆ. ಶಿವಕುಮಾರ್ : ಈಗಾಗಲೇ ಅಲ್ಲಿ ಒಂದು ಐ.ಟಿ.ಐ. ಇದೆ. ಅದರಲ್ಲಿ ಹೊಸ ಹೊಸ ಟ್ರೇಡ್ಸನ್ನು ಹೆಚ್ಚು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಕನಕಪುರದಲ್ಲಿ ಎಕ್ಸ್‌ಟ್ರಾ ಕೋರ್ಸನ್ನು ಪ್ರಾರಂಭ ಮಾಡುವ ಉದ್ದೇಶ ಪರಿಶೀಲನೆಯಲ್ಲಿದೆ. ಅಲ್ಲಿ ಯಾವ ಯಾವ ಕೋರ್ಸ್‌ಗಳನ್ನು ಮಾಡಬಹುದು, ಎಂದು ಈ ವರ್ಷ ಆಲೋಚನೆ ಮಾಡಿ ಅದರ ಬಗ್ಗೆ ತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಕಾರ್ಮಿಕ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಕನಕಪುರದಲ್ಲಿ ನಡೆಯುತ್ತಿರುವ ಸರ್ಕಾರೀ ಐ.ಟಿ.ಐ. ಸಂಸ್ಥೆ ಅಲ್ಲಿಯ ಕೆ.ಇ.ಬಿ. ಆಫೀಸ್‌ನಲ್ಲಿ ನಡೆಯುತ್ತಿದೆ. ನಾವು ಬಹಳಷ್ಟು ಕಷ್ಟಪಟ್ಟು ಕೆ.ಇ.ಬಿ. ಅಧಿಕಾರಿಗಳ ಮನವೊಲಿಸಿ ಅಲ್ಲಿ ನಡೆಸುತ್ತಿದ್ದೇವೆ. ಈ ವರ್ಷವಾದರೂ ಅಲ್ಲಿ ಒಂದು ಸರ್ಕಾರೀ ಕಟ್ಟಡವನ್ನು ಕಟ್ಟಿಸುವುದಕ್ಕೆ ಭರವಸೆ ಕೊಡುತ್ತಿರಾ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಭರವಸೆ ಕೊಡುವುದಕ್ಕೆ ಸಾಧ್ಯವಿಲ್ಲ. ಸಾಮಾನ್ಯವಾಗಿ ಎಲ್ಲಾ ಕಡೆ ಐ.ಟಿ.ಐ.ಗಳು ಹೆಚ್ಚಿನ ರೀತಿಯಲ್ಲಿ ಸ್ವಂತ ಕಟ್ಟಡದಲ್ಲೇ ನಡೆಯುತ್ತಿವೆ. ಮಾನ್ಯ ಸದಸ್ಯರು ತಮ್ಮ ಕ್ಷೇತ್ರದಲ್ಲಿ ಒಂದು ಜಾಗವನ್ನು ಒದಗಿಸಿಕೊಟ್ಟರೆ ಬೇಗನೆ ಅಲ್ಲಿ ಕಟ್ಟಡ ಕಟ್ಟಿಸುವ ಏರ್ಪಾಡನ್ನು ನಾನು ಮಾಡುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಸ್ವಾಮಿ, ಇದು 1992-93ನೇ ಸಾಲಿಗೆ ಅಲ್ಲ. 1993-94ನೇ ಸಾಲಿನಲ್ಲಿ ಕಟ್ಟಿಸುವುದಕ್ಕೆ ಭರವಸೆ ಕೊಡುತ್ತೀರಾ? ನಾವು ಜಾಗವನ್ನು ಕೊಡುತ್ತೇವೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಮೊದಲು ಜಾಗವನ್ನು ನೋಡಿ ಹೇಳುತ್ತೇವೆ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಕಟ್ಟಡ ಕಟ್ಟಿಸಿಕೊಡುತ್ತೇವೆಂದು ನಿನ್ನೆ ತಾವೇ ಹೇಳಿದಿರಿ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಮಾನ್ಯ ಸದಸ್ಯರು ತಾವೇ ಹಿಂದೆ ಮಂತ್ರಿಗಳಾಗಿದ್ದಿರಿ. ಆಗ ಏತಕ್ಕೆ ಯಾವದೇ ಭರವಸೆಯನ್ನು ಕೊಟ್ಟಿರಲಿಲ್ಲ?

ಶ್ರೀ ಪಿ. ಜಿ. ಆರ್. ಸಿಂಧ್ಯ : ಅಲ್ಲಿ ಐ.ಟಿ.ಐ. ಯನ್ನು ಪ್ರಾರಂಭ ಮಾಡಿದ್ದೇ ನಾನು.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ನಮ್ಮ ಧೋರಣೆ ಏನೆಂದರೆ, ನಮ್ಮ ಸ್ವಂತ ಕಟ್ಟಡದಲ್ಲಿ ಐ.ಟಿ.ಐ.ಅನ್ನು ನಡೆಸಬೇಕೆಂಬುದು. ನಿನ್ನೆ ತಾವು ನನಗೆ ಒಂದು ಪತ್ರವನ್ನು ಬರೆದಿದ್ದೀರಿ. ಇದನ್ನು ಕೂಡಲೇ ಮಾಡಬೇಕೆಂದಿದ್ದೇವೆ. ಆದರೆ, ನಮ್ಮಲ್ಲಿ ಎಷ್ಟು ಹಣ ಇದೆ, ಈ ವ್ಯವಸ್ಥೆಗೆ ಯಾವರೀತಿ ಹಣವನ್ನೊದಗಿಸಬೇಕೆಂದು ಯೋಚನೆ ಮಾಡಬೇಕಾಗಿದೆ. ಆದ್ದರಿಂದ ಈಗ ನಾನು ಭರವಸೆಯನ್ನು ಕೊಡುವುದಕ್ಕಾಗುವುದಿಲ್ಲ. ಆದರೆ ತಕ್ಕ ಕ್ರಮವನ್ನು ಬೇಗನೆ ತೆಗೆದುಕೊಳ್ಳುತ್ತೇನೆ.

<u>ವಿಷಯ :- ಬೇಲೂರಿನಲ್ಲಿ ಕೈಗಾರಿಕಾ ಎಸ್ಟೇಟ್ ಮಂಜೂರಾತಿ.</u>

Q:962

ಶ್ರೀ ಬಿ.ಹೆಚ್.ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಬೇಲೂರಿನಲ್ಲಿ12 ವರ್ಷಗಳ ಹಿಂದೆ ಕೈಗಾರಿಕಾ ಎಸ್ಟೇಟನ್ನು ಪ್ರಾರಂಭಿಸಲು ಸರ್ಕಾರದಿಂದ ಮಂಜೂರಾತಿ ದೊರೆತಿತ್ತೆ?
2) ಹಾಗಿದ್ದಲ್ಲಿ, ಅದು ಈಗ ಯಾವ ಹಂತದಲ್ಲಿದೆ?

ಶ್ರೀ ಸಿ. ಆರ್. ಸಗೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) :

1) ಹೌದು
2) 1980ರಲ್ಲಿ ಸರ್ಕಾರವು 1.03 ಎಕರೆ ಜಮೀನನ್ನು ಬೇಲೂರಿನಲ್ಲಿ ಸ್ವಾಧೀನಪಡಿಸಿಕೊಂಡಿದ್ದು ನಂತರ ಸರ್ಕಾರದ ಇಲಾಖೆಗೆ ವರ್ಗಾವಣೆ ಮಾಡಲಾಗಿದೆ. ಪುನಃ ಕೆ.ಎಸ್.ಎಸ್.ಐ.ಡಿ.ಸಿ. ಯು 10 ಎಕರೆ ಜಮೀನನ್ನು ಬೇಲೂರಿನಲ್ಲಿ ಸ್ವಾಧೀನಪಡಿಸಿಕೊಳ್ಳಲು ಕ್ರಮ ಕೈಗೊಂಡಿದ್ದು, ಇದಕ್ಕಾಗಿ ಈಗಾಗಲೇ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಲಿಯವರಿಗೆ ಹಣ ಪಾವತಿ ಮಾಡಲಾಗಿದ್ದು, ಈ ಬಗ್ಗೆ ಮಂಡಲಿಯಿಂದ ಭೂ ಸ್ವಾಧೀನದ ನಿರೀಕ್ಷೆಯಲ್ಲಿರುತ್ತದೆ. ಜಮೀನನ್ನು ಸ್ವಾಧೀನ ಪಡಿಸಿಕೊಂಡ ನಂತರ ಸರ್ಕಾರವು ಕೈಗಾರಿಕಾ ವಸಾಹತು ಸ್ಥಾಪಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.